## 19

# ಉತ್ತರವಿಲ್ಲದ ಪ್ರಾರ್ಥನೆಗೆ ಕಾರಣಗಳು

"ನೀವು ಕೇಳಿಕೊಳ್ಳುವಿರಿ ಮತ್ತು ನಿಮಗೆ ದೊರೆಯುವದಿಲ್ಲ" (ಯಾಕೋಬ 4:3ಎ). ಇದು ಎಷ್ಟೋ ಸಲ ಸತ್ಯವಾದದ್ದಾಗಿದೆಯಲ್ಲವೇ! ಕೆಲವರು ತಾವು ಪ್ರಾರ್ಥಿಸಿದ ಸಂಗತಿಗಳನ್ನು ಪಡೆಯದೇ ಇದ್ದುದಕ್ಕಾಗಿ ದೇವರಲ್ಲಿ ಸಂಪೂರ್ಣವಾಗಿ ತಮ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಇನ್ನು ಕೆಲವರು ಅದೇ ಕಾರಣಕ್ಕಾಗಿ ಸಂಶಯಪಡುತ್ತಿದ್ದಾರೆ. ಉತ್ತರ ದೊರೆಯದೇ ಇರುವ ಪ್ರಾರ್ಥನೆಗಾಗಿ ದೇವರನ್ನು ದೂರುವ ಅಗತ್ಯತೆಯಿಲ್ಲ. ಆದರೆ ನಾವು ಅದಕ್ಕಾಗಿ ಹುಡುಕಿದರೆ ಯಾವಾಗಲೂ ಹೆಚ್ಚು ತಾರ್ಕಿಕವಾದ ಒಂದು ಪರಿಹಾರವು ಇದೇ ಇರುತ್ತದೆ. ಉತ್ತರವಿಲ್ಲದ ಪ್ರಾರ್ಥನೆಗಳಿಗೆ ಕಾರಣಗಳು ಯಾವವು?

### ಪ್ರಾರ್ಥಿಸುವವನು ಪ್ರಾರ್ಥಿಸಲು ಅನರ್ಹನಾಗಿರುವನೋ?

ಪ್ರಾರ್ಥಿಸಲು ವ್ಯಕ್ತಿಯು ಅರ್ಹತೆಯಿಲ್ಲದವನಾಗಿರುವನೆಂಬ ಸಂಗತಿಯು ಇರುತ್ತದೆ. ಮೊದಲನೆಯದು, ಪ್ರಾರ್ಥಿಸುವವನು ದೇವರ ಮಗುವಾಗಿರದಿದ್ದರೆ ಇದು ಸತ್ಯವಾಗಿದೆ. ಎಲ್ಲಾ ಆತ್ಮಿಕ ಆಶೀರ್ವಾದಗಳು ಕ್ರಿಸ್ತನಲ್ಲಿವೆ (ಎಫೆಸ 1:3). ಕ್ರಿಸ್ತನ ಹೊರಗಿರುವ ವ್ಯಕ್ತಿಗೆ ಯಾವುದೇ ಆತ್ಮಿಕ ಆಶೀರ್ವಾದಗಳು ವಾಗ್ದಾನ ಮಾಡಲ್ಪಟ್ಟಿರುವದಿಲ್ಲ; ದೇವರ ಮಗುವಾಗಿರುವಂತೆ ಪ್ರಾರ್ಥನೆಯ ಸದವಕಾಶವು ಅವರಿಗಿರುವದಿಲ್ಲ. "ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವ ಪ್ರಾರ್ಥನೆಯೂ ಅಸಹ್ಯ" (ಜ್ಞಾನೋಕ್ತಿ 28:9) ಎಂದು ನಾವು ಓದುತ್ತೇವೆ. ದುಷ್ಟ ಪಾಪಗಳನ್ನು ರೂಢಿಸುತ್ತಿರುವವರ ವಿಷಯದಲ್ಲಿ ಸತ್ಯವಾಗಿರುವದಷ್ಟೇ ಅಲ್ಲ, ಆದರೆ ಒಳ್ಳೆಯ ನೈತಿಕ ಗುಣಗಳಿದ್ದರೂ ಕ್ರಿಸ್ತನಿಂದ ಹೊರಗಿರುವವರ ಬಗ್ಗೆಯೂ ಇದು ಸತ್ಯವಾಗಿದೆ.

ಈ ನಿಯಮಕ್ಕೆ ಹೊರತಾಗಿ ಕೊರ್ನೇಲ್ಯನಂಥ ವ್ಯಕ್ತಿಯಿರುವನು (ಅಪೊಸ್ತಲರ ಕೃತ್ಯ10:1-48). ಸತ್ಯದಲ್ಲಿ ತನ್ನನ್ನು ನಡಿಸಬೇಕೆಂದು ಅವನು ದೇವರಿಗೆ ಪ್ರಾರ್ಥಿಸಿದನು. ಸುವಾರ್ತೆಯನ್ನು ಸಾರಲು ಅವನ ಬಳಿಗೆ ಪೇತ್ರನನ್ನು ಕಳುಹಿಸುವದರಿಂದ ದೇವರು ಅವನ ಪ್ರಾರ್ಥನೆಗೆ ಉತ್ತರ ಕೊಟ್ಟನು.

ಎರಡನೆಯದು, ಒಬ್ಬ ವ್ಯಕ್ತಿಯು ಹಿಂದೆ ಒಂದು ಸಮಯದಲ್ಲಿ ಸುವಾರ್ತೆಗೆ ವಿಧೇಯನಾಗಿದ್ದಿರಬಹುದು. ಆದರೆ ಅವನು ಕ್ರೈಸ್ತ ಜೀವಿತ ಜೀವಿಸದೇ ಇದ್ದ ಕಾರಣದಿಂದ ಸ್ವೀಕಾರ ಯೋಗ್ಯನಾಗಿ ಪ್ರಾರ್ಥಿಸಲಾರನು. ಬಹಶಃ ಅವನು ದೇವರ ಅನ್ಯೋನ್ಯತೆಯಿಂದ ಬಿದ್ದು ಹೋಗಿರಬಹುದು. ನೀತಿವಂತರ ಪ್ರಾರ್ಥನೆಯು "ಬಹಳವಾದದ್ದನ್ನು ಸಾಧಿಸುವುದು" (ಯಾಕೋಬ 5:16). ತಪ್ಪು ಮಾಡುವ ದೇವರ ಮಗನು ತನಗೆ ಪ್ರಾರ್ಥಿಸುವ ಹಕ್ಕು ಇರುವ ಮೊದಲು ಮಾನಸಾಂತರಪಡಬೇಕು (ಅಪೊಸ್ತಲರ ಕೃತ್ಯ 8:22).

ಇತರರ ಕಡೆಗಿರುವ ತಪ್ಪಾದ ಮನೋಭಾವನೆಯಿಂದ ನಮ್ಮ ಪ್ರಾರ್ಥನೆಗಳಿಗೆ ಬಹಳ ಸಲ ಆತಂಕವುಂಟಾಗುತ್ತದೆ. ನಮಗೆ ವಿರುದ್ಧವಾಗಿ ಪಾಪ ಮಾಡುವವರನ್ನು ನಾವು ಕ್ಷಮಿಸುವ ಮಟ್ಟಿಗೆ ನಮ್ಮ ಪಾಪಗಳ ಕ್ಷಮಾಪಣೆಗಾಗಿ ನಾವು ಪ್ರಾರ್ಥಿಸಬೇಕು (ಮತ್ತಾಯ 6:12). ದೇವರಿಗೆ ಕಾಣಿಕೆಯನ್ನು ಸಮರ್ಪಿಸುವದಕ್ಕಿಂತ ಮೊದಲು ಸಹೋದರರೊಂದಿಗೆ ಸಂಧಾನವು ಸಾಧಿಸಲ್ಪಡಬೇಕೆಂದು ಯೇಸು ಬೋಧಿಸಿದನು (ಮತ್ತಾಯ 5:24). ತಮ್ಮ ಪ್ರಾರ್ಥನೆಗಳಿಗೆ "ಅಡ್ಡೀ ಯಾಗದಂತೆ" ಗಂಡಂದಿರು ತಮ್ಮ ಹೆಂಡತಿಯರಿಗೆ ಗೌರವ ಕೊಡಬೇಕೆಂದು ಪೇತ್ರನು ಹೇಳಿದನು (1 ಪೇತ್ರ 3:7).

ಪ್ರಾರ್ಥನೆಗೆ ಉತ್ತರವು ಬರದಿದ್ದರೆ, ಪ್ರಾರ್ಥನೆಯು ನಂಬುವ ಹೃದಯದಿಂದ ಹೊರಟು ಬರಲಿಲ್ಲವೆಂದಾಗುತ್ತದೆ. ಕೆಲವು ಸಮಯಗಳಲ್ಲಿ ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವದಿಲ್ಲ. ಯಾಕಂದರೆ ಅವುಗಳಿಗೆ ಉತ್ತರವು ಬರಬೇಕೆಂದು ನಾವು ನಿರೀಕ್ಷಿಸಿರಲಿಲ್ಲ. ನಮ್ಮ ಪ್ರಾರ್ಥನೆಗಳು ವಿಶ್ವಾಸದ ಪ್ರಾರ್ಥನೆಗಳಾಗಿರಬೇಕು, "ನಂಬಿಕೆಯಲ್ಲಿ ಬೇಡಿಕೊಳ್ಳಿರಿ." ಸಂಶಯದಿಂದ ಹೊಯ್ದಾಡುವವನು "ಗಾಳಿಯಿಂದ ಅಲ್ಲಕಲ್ಲೋಲವಾಗುವ ಸಮುದ್ರದ ತೆರೆಯಂತೆ" ಇರುವನು (ಯಾಕೋಬ 1:6). ಪ್ರಾರ್ಥನೆಯು ಅತ್ಯಾಸಕ್ತಿಯುಳ್ಳದ್ದಾಗಿರ ಬೇಕು - ಸೋಮಾರಿತನದ್ದಾಗಿರ ಬಾರದು. ಅರ್ಧ ಹೃದಯದಿಂದ ಬರುವಂಥದ್ದು ಇಲ್ಲವೇ ಸಂಬಂಧವಿಲ್ಲದಂತೆ ಆಗಿರಬಾರದು (ಯಾಕೋಬ 5:16). ದೇವರೊಂದಿಗೆ ಮಾತನಾಡುವಂಥದ್ದು ಪ್ರಾರ್ಥನೆ ಹೇಳು ವದಕ್ಕಿಂತ" ಹೆಚ್ಚಾದದ್ದಾಗಿರತಕ್ಕದ್ದು.

## ಪ್ರಾರ್ಥನೆಯು ದೇವರ ಚಿತ್ತಕ್ಕೆ ವಿರೋಧವಾದದ್ದಾಗಿರುವುದೋ?

ಉತ್ತರವಿಲ್ಲದ ಪ್ರಾರ್ಥನೆಯ ಕಾರಣಕ್ಕಾಗಿ ನಮ್ಮ ಹುಡುಕುವಿಕೆಯಲ್ಲಿ, ಇಲ್ಲಿ ನಾವು ಯೋಚಿಸಬೇಕಾದ ಎರಡನೆಯ ಪ್ರಶ್ನೆಯಿರುತ್ತದೆ: ಪ್ರಾರ್ಥನೆಯು ದೇವರ ಚಿತ್ತಕ್ಕೆ ಅನುಗುಣವಾದದ್ದಾಗಿರುತ್ತದೋ? "ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆ" (1 ಯೋಹಾನ 5:14ಬಿ).

ನಮಗೆ ಅಪಾಯ ಕಾರಿಯಾದಂಥದ್ದಕ್ಕಾಗಿ ನಾವು ಪ್ರಾರ್ಥಿಸುತ್ತಿರುವೆವೋ? ಹಾಗಿದ್ದರೆ, ದೇವರು ಅದನ್ನು ತಡೆ ಹಿಡಿಯತಕ್ಕದ್ದು. ನಮಗೆ ಕೆಟ್ಟದ್ದಾಗಿ ಪರಿಣಾಮ ವಾಗುವದೆಂದು ಆತನು ತಿಳಿದಿರುವದನ್ನು ಆತನು ಕೊಡುವದಿಲ್ಲ. ಹೆಚ್ಚು ಸ್ವೀಕಾರ ಯೋಗ್ಯವಾದದ್ದಕ್ಕಾಗಿ ಪ್ರಾರ್ಥಿಸಲು ನಾವು ಶಕ್ತರಾಗುವಂತೆ ದೇವರ ವಾಕ್ಯವನ್ನು ತಿಳಿಯುವದಕ್ಕಾಗಿ ನಾವು ಅಧ್ಯಯನ ಮಾಡಬೇಕು. ದೇವರ ಚಿತ್ತದ ಬಗ್ಗೆ ಬಹಳ ಅಲ್ಪವಾದದ್ದನ್ನು ತಿಳಿದದ್ದರಿಂದ ಅನೇಕರು ದೇವರಿಗೆ ಸ್ವೀಕೃತವಾದ ಪ್ರಾರ್ಥನೆಗಳನ್ನು ಸಮರ್ಪಿಸಲು ಕಠಿಣವಾದ ಸಮಯವಿರುವುದು.

## ಪ್ರಾರ್ಥನೆಗೆ ತಪ್ಪಾದ ಉದ್ದೇಶವಿರುವುದೋ?

ಸ್ವೀಕಾರ ಯೋಗ್ಯ ಪ್ರಾರ್ಥನೆಗೆ ಸಾಧ್ಯವಾದ ಅಡ್ಡಿಯಾಗಿರುವ ಉದ್ದೇಶದ ಕಡೆಗೆ ಯಾಕೋಬನು ತೋರಿಸಿದ್ದಾನೆ: "ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ

ದೊರೆಯುವದಿಲ್ಲ" (ಯಾಕೋಬ 4:3). "ನಿಮ್ಮ ಭೋಗಗಳ ಮೇಲೆ ಅದನ್ನು ನೀವು ಸುಂಗಿಬಿಡ ಬಹುದು" ಎಂದು ಕಿಂಗ್ ಜೇಮ್ಸ್ ಆವೃತ್ತಿ ಹೇಳುತ್ತದೆ. ಸ್ವಾರ್ಥತೆಯಿಂದ ಬರುವ ಪ್ರಾರ್ಥನೆಗೆ ಒಳ್ಳೆಯ ಉದ್ದೇಶವಿರುವದಿಲ್ಲ. ಯಾವುದಾದರೂ ಸಂಗತಿಗಾಗಿ ನಾವು ದೇವರಿಗೆ ಪ್ರಾರ್ಥಿಸುವಾಗ, "ಇದಕ್ಕಾಗಿ ನಾನು ಯಾಕೆ ಪ್ರಾರ್ಥಿಸುತ್ತಿದ್ದೇನೆ?" ಎಂದು ನಮ್ಮನ್ನು ಕೇಳಿಕೊಳ್ಳೋಣ. ಹೀಗೆ ಮಾಡುವಲ್ಲಿ, ನಾವು ಅನೇಕ ಉತ್ತರವಿಲ್ಲದ ಪ್ರಾರ್ಥನೆಗಳಿಗೆ ಕಾರಣಗಳನ್ನು ಕಂಡುಕೊಳ್ಳ ಬಹುದು.

## ಮುಕ್ತಾಯ

ಪ್ರಾರ್ಥನೆಗೆ ಉತ್ತರ ದೊರೆಯದೇ ಇದ್ದಾಗ ದೇವರನ್ನು ದೂರುವುದು ಒಬ್ಬ ವ್ಯಕ್ತಿಯ ಪ್ರಥಮ ಪ್ರತಿಕ್ರಿಯೆಯಾಗಿದೆ. ಆದರೆ ಇತರ ಸತ್ಯಗಳೂ ಇವೆ. ನಿಮ್ಮನ್ನು ಪರೀಕ್ಷಿಸಿಕೊಳ್ಳಿರಿ. ನಿಮ್ಮ ಪ್ರಾರ್ಥನೆಗಳನ್ನು ಪರೀಕ್ಷಿಸಿಕೊಳ್ಳಿರಿ. ನಿಮ್ಮ ಉದ್ದೇಶಗಳನ್ನು ಪರೀಕ್ಷಿಸಿಕೊಳ್ಳಿರಿ. ವ್ಯಕ್ತಿ, ಪ್ರಾರ್ಥನೆಗಳು ಮತ್ತು ಉದ್ದೇಶವು ಸ್ವೀಕಾರ ಯೋಗ್ಯವಾಗಿದ್ದರೆ, ಆಗ ದೇವರು ಆಲಿಸುವನು. ಆತನು ತನ್ನ ಚಿತ್ತಕ್ಕನುಸಾರವಾಗಿ ಮತ್ತು ನಿಮಗೆ ಅತ್ಯುತ್ತಮವಾದದ್ದು ಯೋಗ್ಯವಾದದ್ದು ಆಗಿರುವದಕ್ಕೆ ಅನುಸಾರವಾಗಿ ಆತನು ಉತ್ತರ ಕೊಡುವನು.

"ಕರ್ತನೇ, ... ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು" (ಲೂಕ 11:1).

© 2009 Truth for Today